ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಒಂದು ಗುರುತರವಾದಂತಹ ಆರೋಪವನ್ನು ನನ್ನದೇ ಅದಂತಹ ಕೆಲವು ದಾಖಲಾತಿಗಳ ಆಧಾರದ ಮೇಲೆ, ಇದು ನಡೆದಿರಬಹುದೇನೋ ಎಂಬ ಸಂಶಯವನ್ನು ಜನರು ವ್ಯಕ್ತಪಡಿಸುತ್ತಿರುವುದರಿಂದ ನಾವು ಆ ದಾಖಲಾತಿಗಳನ್ನು ಈ ಸದನ ಪ್ರಾರಂಭವಾದಾಗಿನಿಂದ ಇವತ್ತಿನವರೆಗೂ ಕೇಳುತ್ತಿದ್ದೇನೆ. ಟೆಂಡರ್‌ಗಳನ್ನು ಒಡೆಯದೇ ಇರುವುದಕ್ಕೆ ಮುಂಚೆಯೇ ನಾನು ಇಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಅಡ್ವಾನ್ಸ್ ಕೊಟ್ಟಿರುವುದು, ಮಾತುಕತೆ ನಡೆದಿರುವುದು ಇದೆಲ್ಲಾ ಟೆಂಡರ್ ಒಡೆದ ಮೇಲೆಯೇ. ಒಬ್ಬ ಎ ಕ್ಲಾಸ್ ಕಂಟ್ರಾಕ್ಟರ್ ಎಲ್ಲರಿಗೂ ಟೆಂಡರ್ ಹಾಕುವ ಅವಕಾಶ ಇತ್ತು ಎಂದು ಹೇಳಿದ್ದರು. 50 ಕೋಟಿ ರೂಪಾಯಿಗಳ ಟರ್ನ್ ಓವರ್ ಆಗಿರಬೇಕೆಂಬ ಷರತ್ತು ಅದರಲ್ಲಿ ಇರಲಿಲ್ಲ. ಅಡ್ವಾನ್ಸ್ ಕೊಡುತ್ತೇವೆ. ಎನ್ನುವ ಯಾವುದೇ ಮಾಹಿತಿಯನ್ನೂ ಕೊಟ್ಟಿರಲಿಲ್ಲ. ತಮಗೆ ಬೇಕಾದಂತಹ ಯಾರೋ ಕೆಲವು ಕಂಟ್ರಾಕ್ಟರ್‌ಗಳಿಗೆ ಕೊಡುವಂತಹ ಒಂದು ವ್ಯವಹಾರ ನಡೆದಿದೆ ಎಂದು ಜನರಲ್ಲಿ ಒಂದು ಸಂಶಯ ಇದೆ. ಅದನ್ನು ಪರಿಹರಿಸಬೇಕೆಂದು ನಾನು ಇಲ್ಲಿ ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ನಿಂತುಕೊಂಡು ಆ ವಿಷಯವನ್ನು ಪ್ರಸ್ತಾಪ ಮಾಡಿದೆ. ಏಕೋ ಇವತ್ತು ಆ ದಾಖಲಾತಿಗಳನ್ನು ಸರ್ಕಾರ ಬಹಿರಂಗ ಮಾಡದಿರುವುದರಿಂದ, ಇಲ್ಲಿ ನಿಶ್ಚಿತವಾಗಿ ಅವ್ಯವಹಾರ ನಡೆದಿದೆ ಎನ್ನುವ ಸಂಶಯ ಜನರಲ್ಲಿ ಮೂಡುತ್ತಿರುವುದರಿಂದ, ಸರ್ಕಾರವು ದಾಖಲಾತಿಗಳನ್ನು ಕೊಡಲು ಹಿಂದೆ ಮುಂದೆ ನೋಡುತ್ತಿರುವುದರಿಂದ, ಸರ್ಕಾರದ ಈ ನಿಲುವನ್ನು ಪ್ರತಿಭಟಿಸಿ ನಾವು ವಾಕೌಟ್ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ದುರ್ದೈವದ ಸಂಗತಿ ಏನೆಂದರೆ ಎಂಥೆಂಥ ಆಪಾದನೆಗಳನ್ನು ನಾವು ಅಲ್ಲಿ ಕುಳಿತು ಮಾಡಿದ್ದೆವು Sir, this House cannot sit over the judgement of any charges made by any Member of this House. Either the Public Accounts Committee or the Estimates Committee or a Special Committee nominated by the Speakers, I have no objection, to refer to it.

ಇಲ್ಲಿ ಕುಳಿತುಕೊಂಡು, ಅವರು ಏನೋ ದಾಖಲಾತಿಗಳನ್ನು ಇಟ್ಟುಕೊಂಡಿದ್ದಾರೆ, ನಾವು ಏನೋ ದಾಖಲಾತಿಗಳನ್ನು ಇಟ್ಟುಕೊಂಡಿದ್ದೇವೆ ಎಂಬ ಬಗ್ಗೆ ಜಡ್ಜ್‌ಮೆಂಟ್ ಮಾಡುವುದಕ್ಕಾಗುತ್ತದೆಯೇ ? The house Committee is supreme. That is why this Committee system has been evolved ಸಬ್ಜೆಕ್ಟ್ ಕಮಿಟಿ ವಿಷಯ ಬೇರೆ. The legislature Committee is it-